ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನಸಭೆ

(ಎಂಟನೇ ಅಧಿವೇಶನ)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1999

(1999ರ ವಿಧಾನಸಭಾ ವಿಧೇಯಕ ಸಂಖ್ಯೆ-5)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 35) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು, ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಕರ್ನಾಟಕ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, -

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :- (1) ಈ ಅಧಿನಿಯಮವನ್ನು ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು 1999ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಬಾವಿಸತಕ್ಕದ್ದು.

2. 10ನೇ ಪ್ರಕರಣದ ತಿದ್ದುಪಡಿ :- ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 35) 10ನೇ ಪ್ರಕರಣದಲ್ಲಿ (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ).-

(1) ಪ್ರಾರಂಭದ ಪ್ಯಾರಾದಲ್ಲಿ, -

(ಎ) ಬಾಬು (i)ರಲ್ಲಿ, "ಶೇಕಡಾ ಐದು"ಎಂಬ ಪದಗಳಿಗೆ "ಶೇಕಡಾ ಮೂರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಬಾಬು (ii)ರಲ್ಲಿ "ಶೇಕಡಾ ಎಂಟು" ಎಂಬ ಪದಗಳಿಗೆ "ಶೇಕಡಾ ಆರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (ಬ) ಖಂಡದಲ್ಲಿ "ಶೇಕಡಾ ಐದು ಅಥವಾ ಸಂದರ್ಭಾನುಸಾರ ಶೇಕಡಾ ಎಂಟು" ಎಂಬ ಪದಗಳಿಗೆ ಶೇಕಡಾ ಮೂರು ಅಥವಾ ಸಂದರ್ಭಾನುಸಾರ ಶೇಕಡಾ ಆರು ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. **ಅನುಸೂಚಿ ತಿದ್ದುಪಡಿ :-** ಮೂಲ ಅಧಿನಿಯಮದ ಅನುಸೂಚಿಯಲ್ಲಿ 'ಎ' ಭಾಗದಲ್ಲಿ,

(ಎ) 3ನೇ ಬಾಬಿನಲ್ಲಿ (1)ನೇ ಉಪಬಾಬು ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ, ಈ ಮುಂದಿನವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ವಾಹನಗಳ ಸರಕು ಸಹಿತ ತೂಕ

(ಬ)	1,000 ಕೆ.ಜಿ.ಗಳನ್ನು ಮೀರಿದ, ಆದರೆ 3,000 ಕೆ.ಜಿ.ಗಳನ್ನು ಮೀರದ್ದು	600-00
(ಸ)	1,000 ಕೆ.ಜಿ.ಗಳನ್ನು ಮೀರಿದ, ಆದರೆ 5,500 ಕೆ.ಜಿ.ಗಳನ್ನು ಮೀರದ್ದು	1,000-00
(ಡ)	5,500 ಕೆ.ಜಿ.ಗಳನ್ನು ಮೀರಿದ, ಆದರೆ 9,000 ಕೆ.ಜಿ.ಗಳನ್ನು ಮೀರದ್ದು	1,400-00
(ಇ)	9,000 ಕೆ.ಜಿ.ಗಳನ್ನು ಮೀರಿದ, ಆದರೆ 12,000 ಕೆ.ಜಿ.ಗಳನ್ನು ಮೀರದ್ದು	1,800-00
(ಎಫ್)	12,000 ಕೆ.ಜಿ.ಗಳನ್ನು ಮೀರಿದ, ಆದರೆ 15,000 ಕೆ.ಜಿ.ಗಳನ್ನು ಮೀರದ್ದು	2,000-00
(ಜಿ)	15,000 ಕೆ.ಜಿ.ಗಳನ್ನು ಮೀರಿದ, ಆದರೆ +15,000 ಕೆ.ಜಿ.ಗಳನ್ನು ಮೀರಿದ ಪ್ರತಿ	2,000-00 250-00 ಕೆ.ಜಿ.ಗಳಿಗೆ ಅಥವಾ ಅದರ ಭಾಗಕ್ಕೆ 75-00

(ಬ) 4ನೇ ಬಾಬಿನಲ್ಲಿ (4)ನೇ ಉಪಬಾಬಿನಲ್ಲಿ (ಎ) ಮತ್ತು (ಬ) ಖಂಡಗಳಲ್ಲಿ, (3)ನೇ ಅಂಕಣದಲ್ಲಿ "600" ಮತ್ತು "525" ಎಂಬ ಅಂಕಿಗಳಿಗೆ "700" ಮತ್ತು "625" ಎಂಬ ಅಂಕಿಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

(ಸ) 7ನೇ ಬಾಬಿನಲ್ಲಿ (ಬ) ಖಂಡದಲ್ಲಿ, 3ನೇ ಅಂಕಣದಲ್ಲಿ "500" ಎಂಬ ಅಂಕಿಗಳಿಗೆ "1000" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೆ ತರುವುದಕ್ಕಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ತಿದ್ದುಪಡಿಯಿಂದಾಗಿ ಹನ್ನೆರಡು ಕೋಟಿ ರೂಪಾಯಿಗಳಷ್ಟು ಅಂದಾಜು ಒಟ್ಟು ನಷ್ಟ ಉಂಟಾಗುವುದು.

ಬಿ.ಎನ್. ಬಚ್ಚೇಗೌಡ,
ಸಾರಿಗ ಸಚಿವರು.

ಯಾಕೂಬ್ ಷರೀಫ್,
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 35) ಉದ್ಧೃತ ಭಾಗ.

* * * * * * * * *

10ನೇ ಪ್ರಕರಣ - ವಾಹನ ಪಡೆ ಒಡೆಯನ ಸಂದರ್ಭದಲ್ಲಿ ತೆರಿಗೆಯನ್ನು ವಿಧಿಸುವುದು ಇತ್ಯಾದಿ:- 3,6 ಮತ್ತು 7ನೇ ಪ್ರಕರಣಗಳಲ್ಲಿ ಏನೇ ಇದ್ದಾಗ್ಯೂ, ವಾಹನ ಪಡೆಯ ಒಡೆಯನು ಒಡೆಯನಾಗಿರುವ ಸಾರ್ವಜನಿಕ ಸೇವಾ ವಾಹನಗಳ ಹಾಸಲು ಮತ್ತು ಸಾಗಣೆ ಬಾಡಿಗೆಗಳಿಂದ ಬಂದ ಒಟ್ಟು ಆದಾಯದ ಮೇಲೆ ಈ ಮುಂದಿನ ದರದಂತೆ ತೆರಿಗೆಯನ್ನು ವಿಧಿಸತಕ್ಕದ್ದು.

(i) ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 14) 2ನೇ ಪ್ರಕರಣದ (4)ನೇ ಖಂಡದಲ್ಲಿ ಪರಿಭಾಷಿಸಲಾದಂತೆ ಒಂದು ನಗರದ ನಗರ ಪರಿಮಿತಿಗಳೊಳಗೆ ಮತ್ತು ನಗರದ ಪರಿಮಿತಿಗಳಿಂದ ಇಪ್ಪತ್ತೈದು ಕಿ. ಮೀ. ತ್ರಿಜ್ಯದೊಳಗೆ ಪ್ರವರ್ತಿಸುವ ಸಾರ್ವಜನಿಕ ಸೇವಾ ವಾಹನಗಳ ಸಂಬಂಧದಲ್ಲಿ ಶೇಕಡಾ ಐದು ಮತ್ತು

(ii) ಇತರ ಪ್ರಕರಣಗಳಲ್ಲಿ ಶೇಕಡಾ ಎಂಟು -

(ಎ) * * * * * *

(ಬಿ) ಅಂಥ ಪ್ರಾರಂಭಿಕ ಘೋಷಣೆಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ, ತೆರಿಗೆ ನಿರ್ಧರಣೆ ಪ್ರಾಧಿಕಾರಿಯು ಅಂಥ ಘೋಷಣೆಯ ಆಧಾರದ ಮೇಲೆ ಈ ಪ್ರಕರಣದ (ಎ) ಖಂಡದ ಮೇರೆಗೆ ಸದರಿ ವರ್ಷಕ್ಕಾಗಿ ಘೋಷಿಸಿದ ಹಾಸಲುಗಳು ಮತ್ತು ಸಾಗಣೆಗಳ ರೂಪದಲ್ಲಿ ಬಂದ ಅಂದಾಜು ಆದಾಯದ ಶೇಕಡಾ ಐದರಷ್ಟನ್ನು ಅಥವಾ ಸಂದರ್ಭಾನುಸಾರ ಶೇಕಡಾ ಎಂಟರಷ್ಟನ್ನು ಅಂಥ ವಾಹನ ಪಡೆಯ ಒಡೆಯನು ತಾತ್ಕಾಲಿಕವಾಗಿ ಸಂದಾಯ ಮಾಡತಕ್ಕ ತೆರಿಗೆಯ ಮೊಬಲಗೆಂದು ನಿರ್ಧರಿಸತಕ್ಕದ್ದು ಮತ್ತು ವಾಹನ ಪಡೆಯ ಒಡೆಯನಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಆ ವರ್ಷಕ್ಕಾಗಿನ ತೆರಿಗೆಯ ತಾತ್ಕಾಲಿಕ ತೆರಿಗೆ ನಿರ್ಧರಣೆಯ ಪ್ರಮಾಣ ಪತ್ರವನ್ನು ಕೊಡುವ ಮೂಲಕ ಅದನ್ನು ತಿಳಿಸತಕ್ಕದ್ದು.

ಅನುಸೂಚಿ

ಭಾಗ 'ಎ'

(ಪ್ರಕರಣ 3(1)ನ್ನು ನೋಡಿ)

ಬಾಬು ಸಂಖ್ಯೆ	ವಾಹನಗಳ ವರ್ಗ	ತ್ರಿಆಯಂ ಟೈರುಗಳನ್ನು ಜೋಡಿಸಿರುವ ವಾಹನಗಳಿಗೆ ತ್ರೈಮಾಸಿಕ ತೆರಿಗೆ ರೂ.ಗಳಲ್ಲಿ
(1)	(2)	(3)
* *	* *	* * *
3.	ಸಂಚಾರಿ ಫಲಹಾರ ವಾಹನ, ಸಂಚಾರಿ ಗ್ರಂಥಾಲಯ ವಾಹನ, ಸಂಚಾರಿ ಕಾರ್ಯಾಗಾರ, ಸಂಚಾರಿ ಆಸ್ಪತ್ರೆ, ಕ್ಷಕಿರಣ ವಾಹನ, ಕ್ಯಾಷ್ ವಾಹನ, ಬಾಡಿಗೆಗೆ ಅಥವಾ ಪ್ರತಿಫಲಕ್ಕಾಗಿ ಬಳಸುವ ಕ್ಯಾಂವರ್ ವ್ಯಾನ್ ಸೇರಿದಂತೆ ಸರಕು ವಾಹನಗಳು.	
	(1) ವಾಹನಗಳ ಸರಕು ಸಹಿತ ತೂಕ	
	(ಎ) * * * *	
	(ಬಿ) 1000 ಕೆಜಿಗಳನ್ನು ಮೀರಿದ ಆದರೆ 3000 ಕೆಜಿಗಳನ್ನು ಮೀರದ್ದು	400-00
	(ಸಿ) 3000 ಕೆಜಿಗಳನ್ನು ಮೀರಿದ ಆದರೆ 5500 ಕೆಜಿಗಳನ್ನು ಮೀರದ್ದು	800-00
	(ಡಿ) 5500 ಕೆಜಿಗಳನ್ನು ಮೀರಿದ ಆದರೆ 9000 ಕೆಜಿಗಳನ್ನು ಮೀರದ್ದು	1,200-00
	(ಇ) 9000 ಕೆಜಿಗಳನ್ನು ಮೀರಿದ ಆದರೆ 12,000 ಕೆಜಿಗಳನ್ನು ಮೀರದ್ದು	1,600-00
	(ಎಫ್) 12,000 ಕೆಜಿಗಳನ್ನು ಮೀರಿದ ಆದರೆ 15,000 ಕೆಜಿಗಳನ್ನು ಮೀರದ್ದು	1,800-00
	(ಜಿ) 15,000 ಕೆಜಿಗಳನ್ನು ಮೀರಿದ + 15,000 ಕೆಜಿಗಳನ್ನು ಮೀರಿದ ಪ್ರತಿ 250 ಕೆಜಿಗಳಿಗೆ ಅಥವಾ ಅದರ ಭಾಗಕ್ಕೆ 75-00	1,800-00

4.	(1)	* *	* *
	(2)	* * *	* *
	(3)	* *	* *
	(4)	ಆರು ಜನ ಪ್ರಯಾಣಿಕರನ್ನು ಒಯ್ಯಲು ಅನುಮತಿಸಲಾದ ವಾಹನಗಳು (ಮೋಟಾರು ಕ್ಯಾಬ್‌ಗಳು ಮತ್ತು ಮ್ಯಾಕ್ಸಿ ಕ್ಯಾಬ್)	
	(ಎ)	ಆರು ಚದರ ಮೀಟರುಗಳನ್ನು ಮೀರದ ವಿಸ್ತೀರ್ಣವನ್ನು ಹೊಂದಿರುವುದು ಪ್ರತಿ ಚದರ ಮೀಟರಿಗೆ	600-00
	(ಜಿ)	ಆರು ಚದರ ಮೀಟರು ಮೀರಿದ ನೆಲ ವಿಸ್ತೀರ್ಣವನ್ನು ಹೊಂದಿರುವುದು, ಪ್ರತಿ ಚದರ ಮೀಟರಿಗೆ	525-00
		* **	* **
7.	(ಎ)	* *	* **
	(ಬಿ)	ಮೋಟಾರು ವಾಹನಗಳು (ಪ್ರವಾಸಿಗರನ್ನು ಕೊಂಡೊಯ್ಯುವ ಪ್ರವರ್ತಕರಿಗಾಗಿ ಅಖಿಲಭಾರತ ಪರ್ಮಿಟ್) ನಿಯಮಗಳು 1993ರ ಅಡಿಯಲ್ಲಿ ಮಂಜೂರು ಮಾಡಲಾದ ಪರ್ಮಿಟುಗಳನ್ನು ಹೊಂದಿರುವ, ಬಾಡಿಗೆಗಾಗಿ ಅಥವಾ ಸಂಭಾವನೆಗಾಗಿ ಓಡಿಸಲಾಗುವ ಹನ್ನೆರಡಕ್ಕಿಂತ ಹೆಚ್ಚು ಪ್ರಯಾಣಿಕರನ್ನು (ಚಾಲಕ ಮತ್ತು ನಿರ್ವಾಹಕ ಅಥವಾ ಅಟೆಂಡೆಂಟ್‌ನನ್ನು ಹೊರತುಪಡಿಸಿ) ಕೊಂಡೊಯ್ಯಲು ಅನುಮತಿಸಲಾದ ಮೋಟಾರು ವಾಹನಗಳು - ಪ್ರತಿ ಪ್ರಯಾಣಿಕರಿಗೆ.	500-00

ಕಾಸೂಸಂ. 7439, ಸ.ಶಾ.ಮು.ತುಮಕೂರು. 350 ಪುಸ್ತಕಗಳು ದಿ : 2-12-2000

(B) 025218

ಮುದ್ರಕರು : ಸಹಾಯಕ ನಿರ್ದೇಶಕರು, ಸರ್ಕಾರಿ ಶಾಖಾ ಮುದ್ರಣಾಲಯ, ತುಮಕೂರು